ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 23-27.**
**©*IIMRD*, Mysuru.**
IIMRD JOURNALS
**www.iimrd.com**

# ಪೌರಾಣಿಕ ಹಿನ್ನೆಲೆಯಲ್ಲಿ ಭಕ್ತವತ್ಸಲ ವೀರಭದ್ರನ ಜನನ

**ವಿನೋದಕುಮಾರ ಭದ್ರಪ್ಪ***

*ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿವಿ, ಕಲಬುರಗಿ.

***ಸಾರಾಂಶ: (Abstract)***

*ಹಿಂದೂ ಧರ್ಮ ಧಾರ್ಮಿಕ ನಂಬಿಕೆಗೆ ಪ್ರಸಿದ್ಧವಾದ ಧರ್ಮ ಈ ಹಿನ್ನೆಲೆಯಲ್ಲಿ ಲಕ್ಷಾನು ಲಕ್ಷ ದೇವತೆಗಳು ಈ ಹಿಂದೂ ಧರ್ಮದ ಅಡಿಯಲ್ಲಿ ಇಂದಿಗೂ ಪೂಜಿಸಲ್ಪಡುತ್ತಾರೆ. ಅಂತಹ ದೇವರುಗಳಲ್ಲಿ ವೀರಭದ್ರೇಶ್ವರ ದೇವರು ಕೂಡ ಪ್ರಮುಖವಾದ ದೇವರಾಗಿದ್ದು ಅಪಾರ ಭಕ್ತ ಸಮೂಹವನ್ನು ಹೊಂದಿರುವ ದೇವರಾಗಿದ್ದಾರೆ. ಈ ವೀರಭದ್ರೇಶ್ವರರು ಹೇಗೆ ಜನಿಸಿದರು, ಅದರ ಹಿನ್ನೆಲೆಯ ಮಾಹಿತಿಯನ್ನ ಪ್ರಸ್ತುತ ಪಡಿಸುವುದು ಈ ಲೇಖನದ ಪ್ರಮುಖ ಅಂಶವಾಗಿದೆ.*

***ಮುಖ್ಯಪದಗಳು: (Keywords)*** *ಭಕ್ತವತ್ಸಲ, ವೀರಭದ್ರ, ಪುರಾಣ, ವೀರಶೈವ, ಶಿವ.*

**ಪೀಠಿಕೆ**

ವೀರಭದ್ರನು ಶಿವನ ಮಗನು ವೀರಶೈವರ ಆರಾಧ್ಯ ದೈವ ವೀರಭದ್ರನ ಹುಟ್ಟಿನ ಬಗ್ಗೆ ಅನೇಕ ದಂತ ಕಥೆಗಳಿವೆ. ಶಿವನ ಬೆವರಿನಿಂದ ಹುಟ್ಟಿದನು ಶಿವನು ಜಡೆಗಳನ್ನು ಕೆಡವಿದಾಗ ಹುಟ್ಟಿ ಬಂದನು ಎಂದು ಪುರಾಣಗಳೂ ಬಣ್ಣಿಸಿವೆ. ವೀರಭದ್ರನಿಗೆ ವೀರಶೈವ ಧರ್ಮದಲ್ಲಿ ಮಹತ್ವದ ಸ್ಥಾನವಿದೆ. ಭಾರತದ ಅನೇಕ ಪ್ರದೇಶಗಳಲ್ಲಿ ವೀರಭದ್ರನ ದೇವಾಲಯಗಳಿವೆ. ಅಸಂಖ್ಯ ಭಕ್ತರಿದ್ದಾರೆ. ಕರ್ನಾಟಕವಂತೂ ವೀರಭದ್ರನ ಕೇಂದ್ರ ಸ್ಥಳವಾಗಿದೆ. ಅನೇಕ ವೀರಭದ್ರನ ಮೂರ್ತಿಗಳು, ದೇವಾಲಯಗಳು ನೋಡಲು ಸಿಗುತ್ತವೆ. ಅಖಂಡವಾಗಿ ಉತ್ಸವ ಆರಾಧನೆ, ಜಾತ್ರೆಗಳು ನೂರಾರು ವರ್ಷಗಳಿಂದ ನಡೆದು ಬಂದಿರುವುದನ್ನು ನಾವು ಕಾಣುತ್ತೇವೆ. ಕೈಲಾಸದಲ್ಲಿ ಶಿವನ ಓಲಗ ನಡೆದಿದೆ. ಸಾವಿರಾರು ಭಕ್ತ ಗಣಂಗಳು ನೆರೆದಿದ್ದಾರೆ. ಶಿವನ ಸತಿಯಾದ ದಾಕ್ಷಾಯಿಣಿಯು ಶಿವನ ಎಡಭಾಗದಲ್ಲಿ ಕುಳಿತುಕೊಂಡಿದ್ದಾಳೆ. ಎಲ್ಲ ದೇವಾನು ದೇವತೆಗಳು ತಮತಮಗೆ ಯೋಗ್ಯವಾದ ಆಸನಗಳ ಮೇಲೆ ಕುಳಿತ್ತಿದ್ದಾರೆ. ನಾರದ ತುಂಬುರರು ತಮ್ಮ ಸಂಗೀತ ಮಾಧುರ್ಯದಿಂದ ಎಲ್ಲರ ಮನಗಳನ್ನು ಶಾಂತಗೊಳಿಸಿ ಭಕ್ತಿಯ ಸಾಗರದಲ್ಲಿ ತೇಲಾಡುವಂತೆ ಮಾಡಿದ್ದಾರೆ. ತನ್ಮಯವಾಗಿ ಭೃಂಗಿಶನು ಕಾಲ–ಹೆಜ್ಜೆಗಳನ್ನು ಗೆಜ್ಜೆಗಳ ನಾದಕ್ಕೆ ತಕ್ಕಂತೆ ಎತ್ತಿಡುತ್ತ ಲಾಸ್ಯಮಯವಾಗಿ ನರ್ತನ ಮಾಡುತ್ತಿದ್ದಾನೆ. ಸಭೆಯಲ್ಲಿ ಅಭೂತ ಪೂರ್ವವಾದ ಶಾಂತಿ ಸಮಾಧಾನ ತನ್ಮಯತೆಗಳು ಆವರಿಸಿಕೊಂಡಿವೆ. ಇಂಥ ಸಮಯದಲ್ಲಿ ದಕ್ಷನು ಬಿರುಗಾಳಿಯಂತೆ ಕೈಲಾಸದ ಬಾಗಿಲಿಗೆ ಬಂದು ನಿಂತನು ಉದ್ದಟತನದಿಂದ ಒಳಗೆ ಹೊಗಬೇಕೆಂದು ಬಯಸಿದನು. ಆದರೆ ಶಿವನಾಜ್ಞೆಯಂತೆ ಬಾಗಿಲನ್ನು ಕಾಯುತ್ತಿದ್ದ ನಂದಿಯು ದಕ್ಷನನ್ನು ಒಳಗೆ ಬಿಡಲಿಲ್ಲ. ಶಿವನ ಆಜ್ಞೆಯಿಲ್ಲದೆ ಯಾರೂ ಒಳಗೆ ಹೋಗುವಂತಿಲ್ಲ ಎಂದೂ ವಿನಯದಿಂದ ನುಡಿದನು.

*Please cite this article as:* ವಿನೋದಕುಮಾರ ಭದ್ರಪ್ಪ (2022). ಪೌರಾಣಿಕ ಹಿನ್ನೆಲೆಯಲ್ಲಿ ಭಕ್ತವತ್ಸಲ ವೀರಭದ್ರನ ಜನನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 23–27.*

ನಾನು ಶಿವನ ಮಾವ ಶಿವನಿಗೆ ಮಗಳನ್ನು ಕೊಟ್ಟವನು ಶಿವನಿಗಿಂತಲೂ ದೊಡ್ಡವನು. ಶಿವನು ನನ್ನ ಅಳಿಯ. ಅಳಿಯನ ಆಜ್ಞೆಯನ್ನು ಮಾವ ಪಾಲಿಸಬೇಕೆ ದೂರ ಸರಿ ಎಂದು ದಕ್ಷನು ತನ್ನ ದರ್ಪವನ್ನು ತೋರಲು ಮುಂದಾದನು ಆಗ ಶಿವನಿಗೆ ಬಾಗಿಲಲ್ಲಿ ನಡೆಯುತ್ತಿದ್ದ ಗೊಂದಲದ ಅರಿವಾಗುತ್ತದೆ. ಮಾವ ಬಂದಿರುವುದು ತಿಳಿಯಿತು. ಅವರನ್ನು ಗೌರವದಿಂದ ಕರೆದರೂ ದಕ್ಷನು ಅದಕ್ಕೆ ಸಮ್ಮತಿಸಲಿಲ್ಲ ತನಗೆ ಘೋರ ಅಪಮಾನವಾಯಿತು. ಮೋದಲು ಏಕೆ ಒಳಗೆ ಬಿಡಲಿಲ್ಲ? ಈಗ ಸ್ವತಃ ಶಿವನೆ ಸತಿಯ ಸಮೇತ ಸಕಲ ದೇವಾಧಿ ದೇವತೆಗಳು ಎದ್ದು ಬಂದು ತಪ್ಪನ್ನು ಒಪ್ಪಿಕೊಂಡು ನನ್ನನ್ನು ಒಳಗೆ ಬರಮಾಡಿಕೊಳ್ಳಬೇಕು ಎಂದು ಹಟ ಹಿಡಿದನು. ಹಠವಾದಿಗಳಿಗೆ ಮಹಾಹಠವಾದಿಯಾದ ಶಿವನು ಮಣಿವನೇ? ಆದುದೇನೂ ಹೋದುದೇನು? ಎಲ್ಲ ದೇವತೆಗಳು ಏಕೆ ಎದ್ದು ಬರಬೇಕು ತನ್ನಿಂದ ಅದು ಸಾಧ್ಯವಿಲ್ಲ ಎಂದು ಶಿವನು ನುಡಿದನು. ಶಿವನೆ ಎದ್ದು ಹೋಗಲಿಲ್ಲ ಎಂದ ಮೇಲೆ ಸತಿಯೂ ಏನೂ ಮಾಡಬೇಕೆಂದು ತಿಳಿಯದೆ ಮೌನವಾಗಿ ಕುಳಿತಳು ಶಿವ–ಸತಿ ಇಬ್ಬರೂ ಯಾವುದೂ ಕಾರಣಕ್ಕಾಗಿಯೇ ದಕ್ಷನನ್ನು ಸ್ವಾಗತಿಸಲು ಸಭೆಯಿಂದ ಎದ್ದು ಹೋಗಲಿಲ್ಲ ಎಂದು ತಿಳಿದು ಶಿವಗಣಗಳು ಕುಳಿತ ಸ್ಥಳದಿಂದ ಎದ್ದು ಬರಲಿಲ್ಲ ಇದರಿಂದ ದಕ್ಷನಿಗೆ ಅಪಮಾನವಾದಂತಾಗಿ ಶಿವನನ್ನು ಕುರಿತು ದ್ವೇಷ ಭಾವನೆ ತಾಳಿ ಶಿವನನ್ನು ಕುರಿತು ತನ್ನ ಮನಸ್ಸಿನಲ್ಲಿ ಅನೇಕ ಕೆಟ್ಟವಿಚಾರಗಳಿಂದ ನಿಂದಿಸುತ್ತಾನೆ ಶಿವನಿಗೆ ಹತ್ತಿರದವನಾಗಿಯೂ ಅವನ ಅಂತರಂಗವನ್ನು ಅರಿಯದೆ ಹೋದನು. ಒಂದರಗಳಿಗೆ ಅವನ ವಿಚಾರಗಳಿಗೆ ಮಾಯೇ ಸುತ್ತಿಕೊಂಡಿತ್ತು. ತಾನು ತಿಳಿದುದ್ದೆ ಸತ್ಯ ಉಳಿದುದೆಲ್ಲ ಮಿಥ್ಯ. ತಾನೆ ದೊಡ್ಡವ ತಾನೇ ಬ್ರಹ್ಮನ ಮಾನಸಪುತ್ರ ಇಪ್ಪತ್ತು ನಾಲ್ಕು ಸುಂದರ ಕನ್ಯೆಯರನ್ನು ಪಡೆದ ತಂದೆ ನಾನು ಇಪ್ಪತ್ತು ನಾಲ್ಕು ಅಳಿಯಂದಿರನ್ನು ಪಡೆದ ಮಾವ ನಾನು ಎಲ್ಲರೂ ನನಗೆ ಅಪಾರ ಗೌರವದಿಂದ ಉಪಚರಿಸುತ್ತಾರೆ. ಎದ್ದು ಬಂದು ನಮಸ್ಕರಿಸುತ್ತಾರೆ. ಆದರೆ ಶಿವನೊಬ್ಬನೆ ನನಗೆ ದೂರಿಕರಿಸುತ್ತಾನೆ. ಬೂದಿ ಬಡುಕ ಸ್ಮಶಾನ ವಾಸಿ, ಏನನ್ನು ಕಂಡು ನನ್ನ ಮಗಳು ಇವನ್ನನ್ನು ವರಿಸಿದಳೋ ತಿಳಿಯದು. ಉಡಲು ಒಂದು ಹೊಸ ಬಟ್ಟೆಯಿಲ್ಲ ತೊಡಲು ಎಳ್ಳುಷ್ಟು ಬಂಗಾರವಿಲ್ಲ, ಯಾವ ಐಶ್ವರ್ಯ ನೋಡಿ ಇವನನ್ನು ಮೆಚ್ಚಿದಳೋ ಮರುಳಾದಳೂ ಅವಳಿಗೆ ಗೊತ್ತು ಹಾವು ಚೇಳು, ಡಮರು, ತ್ರೀಶೂಲ, ಚಿಲುಮೆ, ಜಡೆ ಇವೇ ಅವನ ತನ್ನ ಬ್ರಹ್ಮಾಂಡ ಆಸ್ತಿ! ಇಂಥವನೊಂದಿಗೆ ಈರುವುದೇ ಘನತೆಗೆ ಧಕ್ಕೆ ಎಂದು ತಿಳಿದು ಮನತುಂಬ ಕಿಡಿಕಿಡಿಯಿಂದ ಸಿಟ್ಟನ್ನು ದ್ವೇಷವನ್ನು ತುಂಬಿಕೊಂಡು ಹೋದನು.

ಸಿಟ್ಟಿನ ಕೈಯಲ್ಲಿ ವಿವೇಕ ಹೋದರೆ ಆಗುವ ಕೆಲಸಗಳೆಲ್ಲ ಅವಿವೇಕದ ಕೆಲಸಗಳೆ ದಕ್ಷನ ಸಿಟ್ಟು ಅವನಿಗೆ ಬೇರೆ ಒಳ್ಳೆಯ ಕೆಲಸ ಮಾಡಲು ಬಿಡಲಿಲ್ಲ ಸದಾ ಶೀವನ ವಿರುದ್ದ ದ್ವೇಷ, ನನ್ನನ್ನು ಅವಮಾನಿಸಿದ ಶಿವನಿಗೆ ಹೇಗೆ ಪಾಠ ಕಲಿಸಲಿ ಅವನನ್ನು ಹೇಗೆ ಸೋಲಿಸಲಿ ನನ್ನ ಹಿರಿತನವನ್ನು ಹೇಗೆ ಸಾಧಿಸಲಿ ಎಂಬುದೆ ಇವನ ಧ್ಯಾನ ದಕ್ಷನ ಮನಸ್ಥಿತಿಯನ್ನು ಅರಿತು ಮಂತ್ರಿಯ ದಕ್ಷನಿಗೆ ಅನೇಕ ಬಗೆಯಲ್ಲಿ ತಿಳಿಸಿ ಹೇಳಿದರೂ ಕೇಳದೆ ನೀನೂ ನನ್ನನ್ನೂ ತೆಗಳಿ ಶಿವನನ್ನು ಹೊಗಳುತ್ತಿರುವುದು ಸರಿಯಲ್ಲ ನನ್ನ ಶಕ್ತಿಯ ಪರಿಯನ್ನ ನೀನು ಅರಿಯೇ ಶಿವನನ್ನು ನನ್ನ ಎದುರಿಗೆ ಹೂಗಳಿದ ನೀನೂ ಒಂದು ಕ್ಷಣವು ನಿಲ್ಲಬೇಡ ಹೊರಟು ಹೋಗು ಎಂದು ಮಂತ್ರಿಯನ್ನು ಹೀಯಾಳಿಸಿ ಹೊರಗೆ ಹಾಕುತ್ತಾನೆ. ಆದರೂ ಮಂತ್ರಿಯು “ಅರಸನೆ ಶಿವನಿಗಿಂತ ಹಿರಿದಾದ ಬಲವನ್ನು ಪಡೆಯಲು ಶಿವನ ಕೃಪೆಯ ಬೇಕು. ಮೊದಲಿಗೆ

ನಿನ್ನ ಉದ್ದೇಶವೆ ಸರಿಯಾದುದಲ್ಲ ಅಹಂಕಾರದಿಂದ ಕುತ್ಸಿತ ಮನಸ್ಸಿನಿಂದ ಕೂಡಿದ ಯಾಗವು ಯಾಗವಲ್ಲ ಯಾಗದಿಂದ ಬೇಕಾದುದ್ದು ಮಾಡುತ್ತೇನೆ ಎಂಬ ವಾಮ ಮಾರ್ಗವೂ ಯೋಗ್ಯವಾದುದಲ್ಲ. ಶಿವನನ್ನೂ ಶಿವಭಕ್ತಿಯಿಂದ ಗೆಲ್ಲಲು ಮಾತ್ರ ಸಾಧ್ಯ. ಇದನ್ನು ವಿಚಾರಿಸಿ ನೋಡು ಎಂದು ಮಂತ್ರಿ ವಿದಗ್ದನು ಪರಿಪರಿಯಾಗಿ ತಿಳಿಸಿದನು ಅದನ್ನು ಕೇಳದೆ ತನ್ನ ಹಠವನ್ನು ಸಾಧಿಸಲು ಅಗ್ನಿ ಹೋಮಗಳನ್ನು ಮಾಡಲು ಯೋಚಿಸಿದ್ದಾನೆ. ಅಗ್ನಿಹೋಮ ಯಾಗವನ್ನು ಮಾಡಲು ಯೋಚಿಸಿದ್ದೇನೆ. ಇದರಲ್ಲಿ ಎಲ್ಲ ದೇವಾಧಿದೇವತೆಗಳು ಭಾಗವಹಿಸಬೇಕು ಋಷಿಮುನಿಗಳು ಭಾಗವಹಿಸಬೇಕು. ಬಹಳ ದೋಡ್ಡ ಯಾಗ ಶಿವನಿಗೆ ತಿಳಿಯದೆ ಈ ಯಾಗ ಮಾಡಬೇಕು. ಶಿವನಿಗೆ ಆಮಂತ್ರಣ ಕೊಡಲೆಬಾರದು. ಈ ವಾಮ ಮಾರ್ಗದಿಂದ ನಾನು ಯಶಸ್ವಿಯಾಗಿ ಯಾಗವನ್ನು ನೆರವೇರಿಸಿ ಅಪಾರ ಬಲವನ್ನು ಪಡೆಯುತ್ತೇನೆ. ಆಗ ನನ್ನ ಎದರು ನಿಲ್ಲುವವರು ಯಾರು ಎಂದು ಸೆಡ್ಡುಹೊಡೆದು ನಿಲ್ಲವನು. ದಕ್ಷನು ಗುಪ್ತವಾಗಿ ಕಾಶಿಕ್ಷೇತ್ರದಲ್ಲಿ ಯಾಗ ಮಂಟಪವನ್ನು ರಚಿಸಿದುದನ್ನು ಅರಿತು ದೇವತೆಗಳು ಶಿವನಿಗೆ ಆಮಂತ್ರಣವಿಲ್ಲದೆ ಯಾಗ ನಡೆಯುವುದಿಲ್ಲ ಎಂದು ತಿಳಿದು ಎಲ್ಲಾ ದೇವಾನುದೇವತೆಗಳು ಯಾಗದಲ್ಲಿ ಪಾಲ್ಗೋಳಲು ಆಗಮಿಸುತ್ತಾರೆ. ವಿಷ್ಣು ಯಾಗದ ರಕ್ಷಕನಾದರೆ ಮುನಿಗಳು ಋತ್ವಿಜರಾದರೂ. ಅಷ್ಟದಿಕ್ಪಾಲಕರು ಕಾವಲುಗಾರರಾದರು ಹೀಗೆ ಬ್ರಹ್ಮ, ವಿಷ್ಣು ದೇವಾದಿ ದೇವತೆಗಳು ವಿದ್ಯಾಧರರು, ಗರುಡರು, ಗಂಧರ್ವರು, ಖೇಚರರು, ಮುನಿಗಳು ಮುಂತಾದವರೆಲ್ಲ ಯಾಗಮಂಟಪದಲ್ಲಿ ತಮ ತಮಗೆ ಯೋಗ್ಯವಾದ ಸ್ಥಳದಲ್ಲಿ ಕುಳಿತು ಯಾಗದ ಆರಂಭವನ್ನು ಎದರು ನೋಡುತ್ತಿದ್ದರು.

ದಕ್ಷನು ಗಡಿಬಿಡಿಯಿಂದ ಕೈಯಲ್ಲಿ ಕೋಲನ್ನು ಹಿಡಿದು ಮೈಗೆ ಬೆಣ್ಣೆಯನ್ನು ಬಳಿದುಕೊಂಡು ಜಿಂಕೆಯ ಚರ್ಮವನ್ನು ಹೊದೆದು ಯಜ್ಞವನ್ನು ಆರಂಭಿಸಬೇಕೆಂದು ಬಗೆದನು ಶಿವನು ಏಕೆ ಬರಲಿಲ್ಲ ಎಂದು ಯಾರಾದರೂ ಕೇಳುವ ಮೊದಲೇ ಯಾಗವನ್ನು ಆರಂಭಿಸಿ ಬಿಟ್ಟರೆ ಮುಗಿಯಿತು ಎಂದು ದಕ್ಷನು ಬಗೆದು ಶಿವನಿಲ್ಲದೆ ಯಜ್ಞೆವನ್ನು ಆರಂಭಿಸಿದನು. ಇದನ್ನು ಕಂಡ ದೇವಾನು ದೇವರುಗಳೆಲ್ಲ ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರು. ಇದನ್ನು ಕಂಡ ಪರಮ ಶಿವಭಕ್ತನಾದ ದದೀಚ ಮುನಿಯು ಶಿವನ ಅನುಪಸ್ಥಿತಿಯಿಂದ ಈ ಯಾಗ ಪೂರ್ಣಗೊಳ್ಳಲು ಸಾಧ್ಯವಿಲ್ಲ ಎಂದು ಬುದ್ಧಿವಾದ ಹೇಳುತ್ತಾನೆ. ಅದಕ್ಕೆ ಕೋಪಗೊಂಡ ದಕ್ಷಯಜ್ಞೆ ಅವನ ಎದುರಿಗೆ ಸೇರಿದ್ದ ದೇವತಾ ಸಮೂಹವನ್ನು ಮರೆತು ಅದ್ಯಾವ ಶಿವನು? ಸ್ಮಶಾನವಾಸಿಯಾದ ಅವನಿಂದ ನನಗೇನೂ ಲಾಭ? ಅವನಿಂದ ಆಗಬೇಕಾದ ಕೆಲಸವಾದರೂ ಏನು? ಎಂದು ಸಿಡಿಮಿಡಿಯಾಗಿ ಕೇಳಿದನು. ಅದಕ್ಕೆ ದಧೀಚಿಯು ಶಿವನೆಂದರೆ ಮಂಗಳಕರನು. ಶಿವನಿಲ್ಲದೆ ಯಾಗ ಅಮಂಗಳವಾದುದು. ಶಿವನಿಲ್ಲದ ಯಾಗದಿಂದ ಅದೇನು ಲಾಭ ಪಡೆದುಕೊಳ್ಳಲು ಸಾಧ್ಯ ಎಂದು ಎಷ್ಟೇ ಬುದ್ಧಿವಾದ ಹೇಳಿದರೂ ಕೇಳದೆ ಶಿವನನ್ನು ಕುರಿತು ಅಪಹಾಸ್ಯ ಮಾಡುತ್ತಾನೆ. ಈ ಕಡೆ ಪರಶಿವನು ಇದಾವುದರ ಪರಿವೆಯಿಲ್ಲದೆ ತನ್ನ ಕೈಲಾಸದಲ್ಲಿ ಧ್ಯಾನದಲ್ಲಿ ಮಗ್ನನಾಗಿ ಅರಿತು ಅರಿಯದಂತೆ ನಿರುಮ್ಮಳನಾಗಿದ್ದನು. ಶಿವನ ಸತಿಯಾದ ಸತಿದೇವಿಯು ಹೂಗಳನ್ನಾಯ್ದುಕೊಂಡು ಬರುವಾಗ ಸಹೋದರಿ ರೋಹಿಣಿಯು ಬೆಟ್ಟಿಯಾಗಿ ಅಪ್ಪನಾದ ದಕ್ಷಯಜ್ಞನು ದೊಡ್ಡಯಾಗ ನಡೆಸುತ್ತಿರುವನು ಅದಕ್ಕಾಗಿ ಎಲ್ಲ ಮಕ್ಕಳಿಗೂ ಅಳಿಯಂದಿರಿಗೂ ಆಮಂತ್ರಣ ನೀಡಿರುವುದರಿಂದ ನಾವು ಹೋಗುತ್ತಿದ್ದೇವೆ ಎಂದು ಹೇಳಿ ಏಕೆ ಅಪ್ಪ ನಿಮಗೆ ಈ ವಿಷಯ ತಿಳಿಸಲಿಲ್ಲಲ್ಲವೆ ಎಂದು ಹೇಳಿ ಚಂದ್ರನ ಹಿಂದೆ ಹೋದಳು.

ಈ ಎಲ್ಲ ವಿಷಯವನ್ನು ಕೇಳಿ ಸತಿದೇವಿಗೆ ಆಶ್ಚರ್ಯವೆನಿಸಿ ತನ್ನ ತಂದೆ ನನಗೆ ಈ ವಿಷಯ ತಿಳಿಸದೆ ಯಾಗ ಆರಂಭಿಸಿದೇನೆ. ತಾನು ಅವನ ಮಗಳಲ್ಲವೆ. ಇದರಲ್ಲಿರುವ ಗುಟ್ಟು ಏನು ಎಂದು ಚಿಂತಾಕ್ರಾಂತಳಾಗಿ ಹತ್ತೆಂಟು ಪ್ರಶ್ನೆಗಳು ಅವಳ ಮನಸ್ಸಿನಲ್ಲಿ ಮೂಡಿ ಯಾವುದಕ್ಕೂ ಉತ್ತರಸಿಗದೆ ಅವಳು ಶಿವನಲ್ಲಿಗೆ ಹೋಗಿ ಈ ವೃತ್ತಾಂತವನ್ನು ತಿಳಿಸಿದಳು ಅಂತರಜ್ಞಾನಿಯಾದ ಶಿವನು ಕ್ಷಣದಲ್ಲಿ ದಕ್ಷನ ಮನಸ್ಸನ್ನು ಅರಿತು ಈ ಯಾಗಕ್ಕೆ ನೀನು ಹೋಗಬೇಡ ಅದರಿಂದ ನಿನಗೂ ಒಳ್ಳೆಯದು ನನಗೂ ಒಳ್ಳೆಯದು ದಕ್ಷನಿಗೂ ಒಳ್ಳೆಯದು ಎಂದು ಸತಿದೇವಿಗೆ ತಿಳಿಸಿ ಹೇಳಿದನು. ಆದರೆ ಸತಿದೇವಿಯು ಶಿವನ ಮಾತನ್ನು ಕೇಳದೆ ತಂದೆಯ ಯಾಗಕ್ಕೆ ಎಲ್ಲರೂ ಬಂದಿರುತ್ತಾರೆ ಎಲ್ಲರೂ ಭೇಟಿಯಾಗುತ್ತದೆ ಎಂದು ಗಡಿಬಿಡಿಯಲ್ಲಿ ತಂದೆ ನಮ್ಮನ್ನು ಮರೆತಿರಬಹುದು ನಾವೇ ಹೋಗೋಣ ಎಂದು ಶಿವನಿಗೆ ಹೇಳುತ್ತಾಳೆ ಮತ್ತು ಯಾಗಕ್ಕೆ ಹೋಗಬೇಕೆಂದು ಹಠಹಿಡಿಯುತ್ತಾಳೆ ಶಿವನು ಎಷ್ಟೇ ಬುದ್ಧಿವಾದ ಹೇಳಿದರು ಕೇಳದೆ ಹೋಗಬೇಕೆಂದು ತಿರ್ಮಾನಿಸಿದಳು ಕೊನೆಗೆ ಶಿವನು ನೀನು ಈ ಯಾಗಕ್ಕೆ ನಂದಿ ಮತ್ತು ಸತಿಯ ಜೊತೆ ಅವಳ ಸಖಿಯನ್ನು ಕಳಿಸಿಕೊಡುತ್ತಾನೆ ತಾನೂ ಹೋಗುವುದಿಲ್ಲ. ಸತಿದೇವಿಯು ಕಾಶೀಕ್ಷೇತ್ರಕ್ಕೆ ಬಂದು ಯಾಗದಲ್ಲಿ ಪಾಲ್ಗೋಳ್ಳಲು ಹೋಗುತ್ತಾಳೆ ಆದರೆ ದಕ್ಷನು ಅವಳನ್ನು ಮಾತನಾಡಿಸಲೇ ಇಲ್ಲ ಅವಳನ್ನು ಕಣ್ಣೆತ್ತಿಯೂ ನೋಡಲಿಲ್ಲ ಇದರಿಂದ ಅಪಮಾನಗೊಂಡ ಸತಿದೇವಿಯು ದಕ್ಷಯಜ್ಞನನ್ನು ಕುರಿತು ನಾನು ನಿನ್ನ ಮಗಳಲ್ಲವೆ? ಶಿವನು ನಿನ್ನ ಅಳಿಯನಲ್ಲವೆ ನೀನು ಮಾಡುವ ಯಾಗಕ್ಕೆ ಎಲ್ಲರನ್ನು ಕರೆದಿರುವೆ ಆದರೆ ನನ್ನನ್ನು ಶಿವನ್ನನ್ನೂ ಏಕೆ ಕರೆಯಲಿಲ್ಲ ನೀನು ಕರೆಯದೆ ಇದ್ದರೂ ನಿನಗೆ ಒಳ್ಳೆಯದಾಗಲಿ ಎಂದು ಹಾರೈಸಲು ನಾನೂ ಈ ಯಾಗಕ್ಕೆ ಬಂದರೂ ನನ್ನನ್ನೂ ಮಾತನಾಡಿಸದೆ ಅವಮಾನಿಸುತ್ತಿರುವದು ನಿನ್ನ ಯೋಗ್ಯತೆಗೆ ಶೋಭಿಸುವುದಿಲ್ಲ ಎಂದು ಘರ್ಜಿಸಿದಳು ಅದಕ್ಕೆ ದಕ್ಷಯಜ್ಞನು "ನನ್ನ ಯೋಗ್ಯತೆಯನ್ನು ಅಳೆಯುವ ಮೊದಲು ನಿನ್ನ ಯೋಗ್ಯತೆಯನ್ನು ತಿಳಿದುಕೋ, ಇರಲು ಮನೆಯಿಲ್ಲ ಉಡಲು ಬಟ್ಟೆಯಿಲ್ಲ, ತೊಡಲು ಆಭರಣಗಳಿಲ್ಲದ ಆ ನಿನ್ನ ಗಂಡ ಒಬ್ಬ ಬೂದಿ ಬಡುಕ ಹೆಂಡ ಕುಡುಕ, ನಿನಗೆ ಯೇತರ ಗೌರವ ನಿನಗೆ ಇಲ್ಲಿ ಕರೆದದ್ದು ಯಾರು? ಏಕೆ ಬಂದಿದ್ದು? ಹೊರಟು ಹೋಗು ಇಲ್ಲಿಂದ ಎಂದು ಅವಮಾನಿಸುತ್ತಾನೆ. ಇಂಥ ಮಾತುಗಳಿಂದ ತುಂಬ ನೊಂದು ಕೊಂಡ ಸತಿದೇವಿಯು ಶಿವನ ಮಾತನ್ನು ಕೇಳದೆ ನಾನು ಇಲ್ಲಿಗೆ ಬಂದಿದ್ದು ದೊಡ್ಡ ಪ್ರಮಾದವಾಯಿತು. ಇಂಥ ಅವಮಾನವನ್ನು ಹೊತ್ತುಕೊಂಡು ಹೇಗೆ ನಾನು ಬದುಕಲಿ ಎಲ್ಲರೂ ನನ್ನನ್ನೂ ಮಾತನಾಡಿಸದೇ ನನ್ನ ಕಷ್ಟವನ್ನು ಕೇಳದೆ ತಮ್ಮ ಸಂತೋಷದಲ್ಲಿ ಮುಳುಗಿದ್ದಾರೆ. ನನಗೆ ಅಪಮಾನವಾದರೆ ನಾನು ಸಹಿಸಿಕೊಳ್ಳುತ್ತೇನೆ. ಆದರೆ ಶಿವನಿಂದೆಯನ್ನು ಕೇಳಿ ಸುಮ್ಮನಿರಲು ಸಾಧ್ಯವೆ ಶಿವನನ್ನು ನಿಂದಿಸಿದ ನಿನಗೆ ತಕ್ಕ ಫಲ ಸಿಗದೇ ಇರದು ನಿನ್ನಿಂದ ಪಡೆದ ಈ ದೇಹವನ್ನು ಹೊತ್ತು ಇನ್ನು ಶಿವನಲ್ಲಿಗೆ ಹೋಗಾಲಾರೆನು ಎಂದು ಆವೇಶದಿಂದ ನುಡಿದು ಬಿರಬಿರನೆ ಹೆಜ್ಜೆಹಾಕಿ ಉರಿವ ಅಗ್ನಿಕುಂಡದಲ್ಲಿ ಬೂದಿಯಾದಳು ಈ ಘಟನೆಯಿಂದ ನೆರೆದಿದ್ದ ದೇವಾನುದೇವತೆಗಳು ಮುಂದೆನಾಗುವುದೋ ಎಂಬ ಭಯದಿಂದ ಓಡಿ ಹೋಗಲು ಪ್ರಯತ್ನಿಸಿದರು ಶಿವನ ಕೋಪಾಟೋಪಗಳನ್ನು ಬಲ್ಲ ಅವರು ಮುಂದಿನ ಅನಾಹುತಗಳನ್ನು ನೆನೆದು ಮಂಕು ಬಡಿದವರಂತೆ ನಿಂತರು. ಅದಕ್ಕೆ ದಕ್ಷನು "ನೀವು ಯಾರು ಹೆದರಬೇಡಿರಿ ಶಿವನೂ ಏನೂ ಮಾಡಲಾರನು. ಈ ಯಾಗದಿಂದ ಅವನಿಗಿಂತ ಮಿಗಿಲಾದ ಶಕ್ತಿ ನನಗೆ ದೊರೆಯಲಿದೆ ಅದರಿಂದ ಅವನಿಗೆ ತಕ್ಕ ಪಾಠ

ಕಲಿಸುತ್ತೇನೆ ಯಾಗವನ್ನು ಮುಗಿಸಲು ನೀವು ಸಹಕರಿಸಿ ಎಂದು ನಾಚಿಕೆಯಿಲ್ಲದೆ ನುಡಿದನು. ನಿಂತುಕೊಂಡಿದ್ದ ದೇವತೆಗಳು ಹಾಗೆಯೇ ಕುಳಿತುಕೊಂಡರು.

ಸತಿಯುದಕ್ಷನ ಯಜ್ಞಕುಂಡದಲ್ಲಿ ಹಾರಿ ಆತ್ಮಾರ್ಪಣೆ ಮಾಡಿಕೊಂಡ ಸುದ್ದಿ ಕ್ಷಣಾರ್ಧದಲ್ಲಿ ಶಿವನ ಕಿವಿಗೆ ಮುಟ್ಟಿತು ದಕ್ಷನು ಮಾಡಿದ ಅಪಮಾನದಿಂದಾಗಿ ಸತಿಯೂ ಗತಪ್ರಾಣಳಾದಳು. ನಿಷ್ಕಾರಣವಾಗಿ ಸತಿಯ ಸಾವಿಗೆ ಕಾರಣನಾದ ಅಹಂಕಾರಿ ದುಷ್ಟಹಟಮಾರಿಯಾದ ನಿಷ್ಕುರಣಿ ಹುಂಬ ದಕ್ಷನ ಸೊಕ್ಕನ್ನು ಅಡಗಿಸಿಬೇಕು ಸತಿಯೂ ಮಾಡಿದ ತಪ್ಪಾದರೂ ಏನು? ತಂದೆಯ ಯಾಗಕ್ಕೆ ಹೋದುದು ತಪ್ಪೆ? ತಂದೆ ಮಾಡುತ್ತಿರುವ ತಪ್ಪನ್ನು ತಿದ್ದುವೆನೆಂದುದು ತಪ್ಪೆ ತಂದೆಗೆ ಅವಳು ತಂದೆಯ ಏಳಿಗೆಗಾಗಿ ಹೋದ ಅವಳನ್ನು ಅವಮಾನಿಸಿ ಅವಳ ಸಾವಿಗೆ ಕಾರಣನಾದ ದಕ್ಷಯಜ್ಞನ ಸೊಕ್ಕನ್ನು ಮುರಿಯಲೆಬೇಕು. ದಕ್ಷನಿಗೆ  ತಕ್ಕ ಶಿಕ್ಷೆ ಜಾರಿಯಾಗಲೇಬೇಕು ಎಂದು ಶಿವನು ವೀರಾವೇಶದಿಂದ ಭಯಂಕರವಾಗಿ ಆರ್ಭಟಿಸಿ ಶಿವನ ಕೆಂಗಣ್ಣಿನ ಕಿಡಿಗಳು ಆಕಾಶದೆತ್ತರಕ್ಕೆ ಸಿಡಿದವು. ಛಟ–ಛಟ ಪಟ್ ಫಟಲ್– ಧಗ್–ಧಗ್–ಧಗ್ ಎಂಬ ಶಬ್ದದೊಂದಿಗೆ ಶಿವನ ಜಡೆಯಿಂದ ತೇಜಪುಂಜವಾದ ಬೆಳಕಿನ ಕೆಂಡವೊಂದು ರೂಪಗೊಂಡಿತು. ಆ ರೋಷವು ಭಯಂಕರವಾದ ವೀರ ಪುರುಷನ ಆಕಾರ ಪಡೆಯಿತು. ಅವನನ್ನು ವೀರಭದ್ರ ಎಂದು ಶಿವನು ನಾಮವಿಟ್ಟು ಕರೆದನು. ವೀರಭದ್ರನ ಜನನಕಾಲಕ್ಕೆ ಸಮುದ್ರಗಳು ಅಲ್ಲೋಲ ಕಲ್ಲೋಲವಾದವು ಪರ್ವತಗಳು ನಡುಗಿದವು. ಭೂಮಿಯು ಕಂಪಿಸಿತು ಆಕಾಶದಿಂದ ಚುಕ್ಕೆಗಳು ನೆಲಕ್ಕೆ ಉದುರಿದವು.

ಶಿವನ ಸಿಟ್ಟಿನ ಅವತಾರವಾದ ವೀರಭದ್ರನು ಪ್ರಳಯಕಾಲದ ಜ್ವಾಲಾಮುಖಿಯಂತೆ ಭೀಕರನಾಗಿದ್ದನು. ಹುರಿಗೊಂಡ ಮೀಸೆ, ಹಸ್ತದಲ್ಲಿ ಖಡ್ಗ ತ್ರಿಶೂಲ, ತ್ರೀನೇತ್ರಗಳಿಂದ ಕೂಡಿ ಬಿಡು ಜಡೆಯವನಾಗಿ ಶಿವನ ಮುಂದೆ ನಿಂತೂ ಶಿವನೇ ನನಗೆ ಕರೆದ ಕಾರಣವೇನೂ ನಾನು ಮಾಡಬೇಕಾದ ಕೆಲಸವೇನು ಆಜ್ಞೆ ನೀಡು ತಂದೆ ಎಂದು ಕೇಳಿದನು.ಅದಕ್ಕೆ ಶಿವನು “ಮಗನೇ ವೀರಭದ್ರ ನಿನ್ನ ತಾಯಿಯಾದ ಸತಿಯ ಸಾವಿಗೆ ದಕ್ಷನೇ ಕಾರಣ ದಕ್ಷನ ಅಹಂಕಾರ ಸೊಕ್ಕು ನಿರ್ದಯತೆ, ಹಠಮಾರಿತನ, ಪರನಿಂದನೆಗಳು ಮೇರೆ ಮೀರಿವೆ ಅವನು ಯಾರ ಮಾತಿಗೂ ಬೆಲೆ ಕೊಡುವುದಿಲ್ಲ ಅವನ ಅಹಂಕಾರವನ್ನು ಅಡಗಿಸು ಹಠದ ಹಲ್ಲನ್ನು ಮುರಿ ಸೊಕ್ಕಿನ ಕತ್ತನ್ನು ಕತ್ತರಿಸು ಎಂದು ಆಜ್ಞೆ ನೀಡಿದನು. ಹೀಗೆ ದಕ್ಷಯಜ್ಞನ ಸೊಕ್ಕನ್ನೂ ಮುರಿಯಲು ಮತ್ತು ಶಿವನ ಸತಿಯಾದ ಸತಿಗೆ ಆವಮಾನದ ಸೇಡನ್ನು ತಿರಿಸಿಕೊಳ್ಳಲು ಸೃಷ್ಠಿಮಾಡಿದ ಶಿವನ ಮಗನಾದ ವೀರಭದ್ರನು ಹಲವಾರು ಜನರ ಮನೆಯ ಆರಾಧ್ಯ ದೇವರಾಗಿ ಅಪಾರ ಭಕ್ತ ಸಮೂಹವನ್ನು ಹೊಂದಿರುವ ದೇವರಾಗಿದ್ದಾನೆ. ಹೀಗೆ ಭಕ್ತವತ್ಸಲ ವೀರಭದ್ರನು ಈ ಲೋಕದ ಉದ್ಧಾರಕ್ಕಗಿ ಸಾಕ್ಷತ ಶಿವನ ವರಪ್ರಸಾದವಾಗಿ ಜನಿಸಿದನು ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಪೂಜಾರಿ ಬಿ.ಬಿ. ಭಕ್ತವತ್ಸಲ ವೀರಭದ್ರ. ಶ್ರೀ ವೀರಭದ್ರೇಶ್ವರ ದೇವಸ್ಥಾನ ಪಂಚ ಕಮಿಟಿ, ಹುಮನಾಬಾದ.
- ಪೂಜಾರಿ ಬಿ.ಬಿ. (2006). ವೀರಭದ್ರ. ಕೊತ್ತಲಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಹೈದ್ರಾಬಾದ